ಸಿವಿಲ್ ಮಿಸ್. ನಂ. 1/2014

ಪಿ ಡಬ್ಲ್ಯೂಃ 1

ಸಾಕ್ಷಿಯನ್ನು ದಿಃ 06-01-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಮುಂದುವರಿದ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರಿದ ಪಾಟೀ ಸವಾಲು ಃ ಎದ್ರುದಾರ ಪರಃ ಶ್ರೀ ವಿ ಎ ಟಿ ವಕೀಲರಿಂದಃ**

ಅರ್ಜಿಯಲ್ಲಿ ಹೇಳಿದ ಮನೆ ಸುಬ್ರಾಯ ಕರ್ಕಿಯವರು ಕಟ್ಟಿದ ಮನೆ ಎಂದರೆ ಸರಿ. ಸುಬ್ರಾಯ ಕರ್ಕಿಯವರು ಮನೆ ಕಟ್ಟಿದ್ದಾಗಿ ನಾನು ಹುಟ್ಟಿರಲಿಲ್ಲ. ನನ್ನ ತಾಯಿಗೆ ಕಾರವಾರದ ಶಿರವಾಡದಲ್ಲಿ ಮದುವೆಯಾಗಿತ್ತು. ನನ್ನ ತಂದೆ ಕಾರವಾದಲ್ಲಿ ಎಲ್ಲಿ ಉಳಿಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಕಾರವಾರ ತಾಲ್ಲೂಕು ಶಾಲೆ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದಿದ್ದೇನು. ಶಾಲೆಗೆ ಹೋಗುವಾಗ ನಾನು ನನ್ನ ತಂದೆಯ ಮನೆಯಿಂದ ಬರುತ್ತಿದ್ದೇನು. ಆಗ ನಾನು ಆಶ್ರಮ ರಸ್ತೆಯಿಂದ ಶಾಲೆಗೆ ಬರುತ್ತಿದ್ದೇನು. ವಿದ್ಯಾಭ್ಯಾಸ ಮುಗಿದ ನಂತರ ನಾನು ಆಶ್ರಮ ರಸ್ತೆಯಲ್ಲಿ ನನ್ನ ತಂದೆಯವರು ಮನೆಯಲ್ಲಿ ವಾಸಿಸುತ್ತಿದ್ದೇನು. ನನ್ನ ಮದುವೆ 1978 ಡಿಸೆಂಬರ್ 24 ರಂದು ಆಗಿತ್ತು. ನಾನು ಮದುವೆಯಾದ ನಂತರ ನನ್ನ ತಂದೆಯ ಮನೆಯಾದ ಆಶ್ರಮ ರಸ್ತೆಯಲ್ಲಿ ಉಳಿಯುತ್ತಿದ್ದೇನು ಎಂದರೆ ಸರಿಯಲ್ಲ. ಮುನ್ಸಿಪಾಲಿಪಿಟಿಯಲ್ಲಿ ಯಾರದ್ದರೂ ತೆರಿಗೆ ಕಟ್ಟಿದ್ದರು ಸಹ ತೆರಿಗೆ ಹಣವನ್ನು ಪಡೆಯುತ್ತಾರೆ ಎಂದರೆ ಸರಿಯಲ್ಲ. ತೆರಿಗೆ ಪಾವತಿಯ ರಶೀದಿಯಲ್ಲಿ ರತ್ನಾಕರ ಸುಬ್ರಾಯ ಕರ್ಕಿಯವರ ಹೆಸರು ಇದೆ ಅದಕ್ಕೆ ತೆರಿಗೆ ನಾನು ಕಟ್ಟಿದ ಬಗ್ಗೆ ಸಹಿ ಇದೆ. ತೆರಿಗೆಯನ್ನು ಯಾರು ಪಾವತಿ ಮಾಡಬಹುದು ಎಂದರೆ ಸರಿಯಲ್ಲ. ಪಾವತಿದಾರರಿಗೆ ಆಸ್ತಿಯಲ್ಲಿ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಮನೆಗೆ ಸಂಬಂಧಪಟ್ಟು ಎದ್ರುದಾರರು ಸಹ ಆಸ್ತಿ ತೆರಿಗೆ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನಗೆ ತೆರಿಗೆ ಪಾವತಿ ಮಾಡಲು ಕಟ್ಟಲು ಯಾರು ಹೇಳದೆ ಇದ್ದರೂ ಸಹ ಹಕ್ಕು ಪಡೆಯುವ ಉದ್ದೇಶದಿಂದ ತೆರಿಗೆ ಪಾವತಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮನೆ ತೆರಿಗೆ ಆಸ್ತಿ ಉತ್ತರದಲ್ಲಿ ರತ್ನಾಕರ ಸುಬ್ರಾಯ ಕರ್ಕಿಯವರ ಹೆಸರು ಇದೆ ಎಂದರೆ ಸರಿ. ರತ್ನಾಕರ ಸುಬ್ರಾಯ ಕರ್ಕಿಯವರು ನನ್ನ ಸೋದರ ಮಾವನು ಹೌದು ಹಾಗೂ ಹೆಣ್ಣು ಕೊಟ್ಟ ಮಾವ ಸಹ ಹೌದು. ರತ್ನಾಕರ ಸುಬ್ರಾಯ ಕರ್ಕಿಯವರು 6 ತಿಂಗಳಿಗೆ ಮನೆಯನ್ನು ನೋಡಿಕೊಳ್ಳಲು ಕೊಟ್ಟಿದ್ದುರೂ ಎಂದರೆ ಸರಿಯಲ್ಲ.

2002 ರಲ್ಲಿ ರತ್ನಾಕರ ಸುಬ್ರಾಯ ಕರ್ಕಿಯವರು ನನಗೆ ಮನೆಯನ್ನು ಬಿಟ್ಟು ಕೊಡಲು ತುಂಭಾ ಭಾರಿ ಕೇಳಿದ್ದರೂ ಎಂದರೆ ಸರಿಯಲ್ಲ. ನಾನು ಅವರಿಗೆ 6 ತಿಂಗಳು ಕಾಲಾವಕಾಶ ಕೇಳಿ ಪತ್ರ ಬರೆದಿದ್ದೇನೆ ಎಂದರೆ ಸರಿಯಲ್ಲ. 6 ತಿಂಗಳು ಮುಗಿದಿದ್ದರೂ ಸಹ ಅದರ ದೂರುಪಯೋಗ ಪಡಿಸಿಕೊಂಡು ನಾನು ಬಲವಂತವಾಗಿ ಅಲ್ಲೇ ಉಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸದ್ರಿ ಮನೆ ಬಿಟ್ಟು ಬೇರೆ ಮನೆ ಇಲ್ಲ ಎಂದು ಪ್ರಮಾಣ ಪತ್ರದಲ್ಲಿ ಹೇಳಿರೂತ್ತೇನೆ ಎಂದರೆ ಸರಿ. ನಾನು ಮತ್ತು ನನ್ನ ಹೆಂಡತಿ ಸೇರಿ ಬಾಲಾಜಿ ಕಂಪ್ಲೆಕ್ಸ್ ನಲ್ಲಿ ಒಂದು ಫ್ಲಾಟ್ ನಂ. 1198/1 ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಮಗನಿಗೆ ಸಾಲ ಸಿಗುವುದಿಲ್ಲ ಎಂಬ ಕಾರಣಕ್ಕೆ ಖರೀದಿ

ಮಾಡಿ ಅವರ ಹೆಸರಿಗೆ ವರ್ಗಾಯಿಸಿದ್ದೇನೆ ಎನ್ನುವರು. ನಾನು ಈಗಲೂ ಸಹ ಆ ಫ್ಲಾಟ್ ನಲ್ಲಿ ಉಳಿದುಕೊಳ್ಳುತ್ತೀದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಹೆಸರಿಗೆ ವರ್ಗಾಯಿಸಿದ ಬಗ್ಗೆ ನಾನು ದಾಖಲೆ ಹಾಜರು ಮಾಡಿಲ್ಲ. ನನ್ನ ಮಗ ಹೋಟೆಲ್ ಮ್ಯಾನೇಜ್‌ಮೆಂಟ್ ಮುಗಿಸಿ ವಿದೇಶದಲ್ಲಿ ಕೆಲಸ ಮಾಡುತ್ತಿದ್ದಾನೆ. ನನಗೆ ಒಬ್ಬಳು ಹೆಣ್ಣು ಮಗಳು ಇದ್ದಾಳೆ. ಅವಳು ಮೊದಲು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು ಈಗ ಸದಾಶಿವಗಡನಲ್ಲಿ ವಾಸಮಾಡಿಕೊಂಡಿರುತ್ತಾಳೆ. ನನ್ನ ಹೆಂಡತಿ ಸದಾಶಿವಗಡದಲ್ಲಿ ನನ್ನ ಮಗಳ ಜೊತೆ ಹೋಗಿ ಬರುದು ಮಾಡುತ್ತಾಳೆ. ನಾನು ಮತ್ತು ನನ್ನ ಹೆಂಡತಿ ಮತ್ತು ಮಗಳು ಸದಾಶಿವಗಡದಲ್ಲಿ ಮನೆ ಖರೀದಿ ಮಾಡಿ ಅಲ್ಲೇ ಉಳಿದು ಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ಅರ್ಜಿಗೆ ಸಂಬಂಧಪಟ್ಟ ಮನೆ ವಾಸಿಸುವ ಸ್ಥಿತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಆ ಮನೆಯಲ್ಲಿ ನಾವು ವಾಸ ಮಾಡುತ್ತೇವೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಗುರುತಿನ ಚೀಟಿ, ಆಧಾರ ಕಾರ್ಡ್ ನಲ್ಲಿ ಉದ್ದೇಶಕ ಪೂರ್ವಕವಾಗಿ ಈ ಕೇಸಿನ ಮನೆಯ ವಿಳಾಸವನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವತ್ತು ಈ ಕೇಸಿನ ಮನೆಯಲ್ಲಿ ವಾಸ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವತ್ತೂ ನನಗೆ ಸದ್ರಿ ಮನೆಯಲ್ಲಿ ಹಕ್ಕು ಉದ್ಭವವಾಗಿಲ್ಲ ಎಂದರೆ ಸರಿಯಲ್ಲ. ಸದ್ರಿ ಪೂರ್ತಿ ಮನಗೆ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು 1968 ರಲ್ಲಿ ಮನೆಯನ್ನು ರಿಪೇರಿ ಮಾಡಿಕೊಂಡು ಬರುತ್ತಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ರಿಪೇರಿ ಮಾಡಿದ ಬಗ್ಗೆ ದಾಖಲೆ ಹಾಜರು ಮಾಡಬಹುದು. ನನ್ನ ತಾಯಿಗೆ ಇರುವ ಹಕ್ಕಿನಷ್ಟೆ ನನಗೆ ಮನೆಯಲ್ಲಿ ಹಕ್ಕು ಬಿಟ್ಟರೆ ಬೇರೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ. ನನ್ನ ಹಾಗೇ ಉಳಿದ ಎದ್ರುದಾರರು ಸಹ ಸದ್ರಿ ಮನೆಯಲ್ಲಿ ಉಳಿದುಕೊಂಡು ಬಂದು ಹೋಗುವುದು ಮಾಡುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಮನೆಯ ಖರ್ಚನ್ನು ಸಹ ಮತ್ತು ರಿಪೇರಿಯನ್ನು ಎದ್ರುದಾರರು ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಎದ್ರುದಾರರು ಸಹ ಮನೆ ತೆರಿಗೆ ಮತ್ತು ನೀರಿನ ಬೀಲ್, ವಿದ್ಯುತ್ ಕರ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಹಣ ಕಟ್ಟುತ್ತಿದ್ದರು ಎಂಬ ಬಗ್ಗ ದಾಖಲೆಗಳು ಇವೇ ಎಂದರೆ ಸರಿಯಲ್ಲ. ಪೂರ್ತಿ ಮನೆ ಮೇಲೆ ಹಕ್ಕು ಇಲ್ಲದಿದ್ದರೂ ಸಹ ಎದ್ರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಎದ್ರುದಾರರ ಪರ ವಕೀಲರು ಕಾಲಾವಕಾಶ ಕೇಳಿದ್ದರಿಂದ ಕಾಲವಾಶ ನೀಡಿ ಮುಂದೂಡಲಾಯಿತು.)

ಸಿವಿಲ್ ಮಿಸ್. ನಂ. 1/2014

ಪಿ ಡಬ್ಲ್ಯೂ: 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.